**ಅ. ದಾ. ಸಂ. ಃ273/2015**
**ಪಿ. ಡಬ್ಲ್ಯೂ ಃ 02**

**ದಿನಾಂಕ ಃ 21-11-2023 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ. ಎಸ್. ಸಿ . ಆರ್, ವಕೀಲರಿಂದ ಃ-**

ಈಗ ನನಗೆ ನಿಪಿ-2 ನ್ನು ತೋರಿಸಿದ್ದು, ಅದರಲ್ಲಿ ಇರುವ ನಕ್ಷೆಯು ಒಂದೇ ಬಣ್ಣದಿಂದ ಕೂಡಿರುತ್ತದೆ ಎಂದರೆ ಸರಿ. ನಿಪಿ-2 ರಲ್ಲಿ ಇರುವ ನಕ್ಷೆಯಲ್ಲಿ ಎರಡು ಬಣ್ಣ ಇರುವುದಿಲ್ಲ ಎಂದರೆ ಸರಿ. ನಿಪಿ-2 ನ್ನು ಮಾಡಲು ಮೂಲ ವಾದಿಯು ತಾಲ್ಲೂಕು ಮೋಜಿನಿದಾರರಿಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ನಿಪಿ-2 ರಲ್ಲಿ ಯಾರ ಸ್ವತ್ತು ಯಾವ ದಿಕ್ಕಿನ ಕಡೆ ಬರುತ್ತದೆ ಎಂದು ನಮೂದಿಸಿರುವುದಿಲ್ಲ ಎಂದರೆ ಸರಿ. ಈಗ ನನಗೆ ನಿಪಿ-1 ನ್ನು ತೋರಿಸಿದ್ದು, ಅದರಲ್ಲಿ ಇರುವ ಅರ್ಜಿದಾರರ ಸಹಿಯು ಗಂಗಾಧರಯ್ಯನವರದ್ದು ಆಗಿರುತ್ತದೆ. ಗಂಗಾಧರಯ್ಯರವರಿಗೆ ಈ ದಾವಾಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. ಮೂಲ ವಾದಿಯು ಅಳತೆ ಮಾಡುವಂತೆ ಕೋರಿ ಸಲ್ಲಿಸಿದ ಅರ್ಜಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಮೂಲ ಸಲ್ಲಿಸಿದ ಅರ್ಜಿಯ ಮೇರೆಗೆ ಯಾವುದೇ ಅಳತೆ ಕಾರ್ಯ ಆಗಿರುವುದಿಲ್ಲ ಎಂದರೆ ಸರಿ. ಮೂಲ ವಾದಿಯು ಸಲ್ಲಿಸಿದ ಅರ್ಜಿಯ ಮೇಲೆ ಅಳತೆ ಕಾರ್ಯವನ್ನು ಮಾಡುವಂತೆ ಹೇಳಿ ಯಾವುದೇ ಆದೇಶ ಆಗಿರುವುದಿಲ್ಲ ಎಂದರೆ ಸರಿ.

ಮೂಲ ವಾದಿಯ ತಂದೆಯ ಕಾಲದಲ್ಲಿಯೂ ಸಹ ದಾವಾಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಅಳತೆ ಆಗಿರುವುದಿಲ್ಲ ಎಂದರೆ ಸರಿ. ಮೂಲ ವಾದಿಯ ತಂದೆಯೂ ಸಹ ದಾವಾಸ್ವತ್ತನ್ನು ಅಳತೆ ಮಾಡುವಂತೆ ಕೋರಿ

ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿ. ಮೂಲ ವಾದಿಯ ತಂದೆಯ ತಂದೆಯು ಸಹ ದಾವಾಸ್ವತ್ತನ್ನು ಅಳತೆ ಮಾಡುವಂತೆ ಕೋರಿ ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ ಮತ್ತು ಅದಕ್ಕೆ ಸಂಬಂಧಿಸಿದಂತೆ ಅಳತೆ ಮಾಡುವಂತೆ ಆದೇಶವು ಆಗಿರುವುದಿಲ್ಲ ಮತ್ತು ಅಳತೆಯು ಆಗಿರುವುದಿಲ್ಲ ಎಂದರೆ ಸರಿ. ಮೂಲ ವಾದಿಯು ಅಳತೆಗೆ ಸಲ್ಲಿಸಿದ ಅರ್ಜಿಯ ಆಧಾರದ ಮೇಲೆ ಸ್ಥಳ ಮಹಜರ್ ಸಹ ಆಗಿರುವುದಿಲ್ಲ ಎಂದರೆ ಸರಿ. ಮೂಲ ವಾದಿ, ಅವರ ತಂದೆ ಮತ್ತು ತಾತನವರು ತಿಮ್ಮಸಂದ್ರ ಗ್ರಾಮದ ಜೋಡಿದಾರರಾಗಿದ್ದರು. ಅವರು ಜೋಡಿದಾರರು ಆಗಿದ್ದರು ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ. ಎಂದಿಗೂ ಸಹ ಮೂಲ ವಾದಿ, ಅವರ ತಂದೆ ಮತ್ತು ತಾತ ಜೋಡಿದಾರರಾಗಿರುವುದಿಲ್ಲ ಮತ್ತು ಅವರ ಹೆಸರಿಗೆ ಜೋಡಿ ಇನಾಮ್ ಸ್ವತ್ತು ಮಂಜೂರಾಗಿರಲಿಲ್ಲ ಎಂದರೆ ಸರಿಯಲ್ಲ. ಮೂಲ ವಾದಿ, ಅವರ ತಂದೆ ಮತ್ತು ತಾತ ಜೋಡಿ ಇನಾಮ್ ಸ್ವತ್ತು ಮಂಜೂರಾಗುವಂತೆ ಕೋರಿ ಅರ್ಜಿಯನ್ನು ಸಲ್ಲಿಸಿದ್ದರ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ದಾವಾಸ್ವತ್ತು ಮೂಲ ವಾದಿ, ಅವರ ತಂದೆ ಮತ್ತು ತಾತನವರಿಗೆ ಮರು ಮಂಜೂರಾತಿ ಆಗಿರುವ ಬಗ್ಗೆ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

ತಿಮ್ಮಸಂದ್ರ ಗ್ರಾಮದ ಮೂಲ ಜೋಡಿದಾರರು ಶ್ರೀನಿವಾಸ್ ಆಚಾರ್ ಎಂದರೆ ಸರಿ. 1895 ರಲ್ಲಿ ಶ್ರೀನಿವಾಸ್ ಆಚಾರ್ ರವರು ನವರತ್ನ ರಾಜಾಚಾರ್ ರವರಿಗೆ ತಿಮ್ಮಸಂದ್ರ ಗ್ರಾಮದಲ್ಲಿ ಅವರಿಗೆ ಸೇರಿರುವ ಅರ್ಧ ಭಾಗವನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ದಿ.24-09-1909 ರಂದು ನವರತ್ನ ರಾಜ ಚಾರ್ ಮಕ್ಕಳುಗಳಾದ ಮಾದವಚಾರ್, ಭೀಮಾಚಾರ್ ಮತ್ತು ಪೂರ್ಣ

ಚಾರ್ ರವರು ಅವರ ತಂದೆಯವರು ಖರೀದಿ ಮಾಡಿದ ಸ್ವತ್ತನ್ನು ನರಸಿಂಹಮೂರ್ತಿ ಚಾರ್ ರವರಿಗೆ ಮಾರಾಟ ಮಾಡಿದ್ದರು ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ದಿ.05-11-1948 ರಂದು ನರಸಿಂಹಮೂರ್ತಿ ಚಾರ್ ರವರ ಮಕ್ಕಳುಗಳಾದ ರಾಘವೇಂದ್ರ ರಾವ್ ಮತ್ತು ನರಸಿಂಹಮೂರ್ತಿಯವರು ಸದರಿ ಆಸ್ತಿಯನ್ನು ಪಟೇಲ್ ಚಿಕ್ಕೇಗೌಡರವರಿಗೆ ಮಾರಾಟ ಮಾಡಿದ್ದರು ಎಂದರೆ ಸರಿ. ಪಟೇಲ್ ಚಿಕ್ಕೇಗೌಡರವರು ಪ್ರತಿವಾದಿಯ ತಾತ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ಈಗ ನನಗೆ ಒಂದು ದಾಖಲೆಯನ್ನು ತೋರಿಸಿದ್ದು, ಅದು ದಿ.05-11-1948 ರ ಕ್ರಯಪತ್ರವಾಗಿದೆ ಎಂದರೆ ಸರಿ. ಸದರಿ ದಾಖಲೆಯನ್ನು ನಿಡಿ-1 ಎಂದು ಗುರುತಿಸಲಾಯಿತು. ನಿಡಿ-1 ರಂತೆ ಪ್ರತಿವಾದಿಯ ತಾತ ಸ್ವತ್ತನ್ನು ಅನುಭವಿಸಿಕೊಂಡು ಬಂದರು ಎಂದರೆ ಇರಬಹುದು. ನಿಡಿ-1 ರಂತೆ ಪ್ರತಿವಾದಿಯ ತಾತನವರು 30 ಸ್ವತ್ತುಗಳನ್ನು ಖರೀದಿ ಮಾಡಿದ್ದರು ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ನಿಡಿ-1 ರಲ್ಲಿ ದಾವಾಸ್ವತ್ತಿನ ಸರ್ವೆ ನಂಬರ್ ಆದ 54 ಸೇರಿದೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ.

ನಿಡಿ-1 ರ ಬಗ್ಗೆ ಪ್ರತಿವಾದಿಯು ತನ್ನ ತಕರಾರಿನಲ್ಲಿ ಹೇಳಿರುತ್ತಾರೆ ಮತ್ತು ಅದನ್ನು ಓದಿ ತಿಳಿದುಕೊಂಡಿದ್ದೇನೆ. ನಿಡಿ-1 ರಲ್ಲಿ 30 ಸ್ವತ್ತುಗಳಿಗೂ ಸಹ ಚೆಕ್ಕುಬಂಧಿಯನ್ನು ನಮೂದಿಸಲಾಗಿರುತ್ತದೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ಈ ಹಿಂದೆ ದಾವಾಸ್ವತ್ತಿನ ಸರ್ವೆ ನಂಬರ್ ನ್ನು ನಾಯಕನ ಪಾಳ್ಯದ ಮದ್ದುಕದ ಜಮೀನು ಎಂದು ಕರೆಯುತ್ತಿದ್ದರು ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ನಿಡಿ-1 ರಂತೆ ಖರೀದಿ ಮಾಡಿದ ಸ್ವತ್ತುಗಳಲ್ಲಿ ಪ್ರತಿವಾದಿಯ ತಾತ ಬದುಕಿದ್ದ ಕಾಲದಲ್ಲಿ ವ್ಯವಸಾಯವನ್ನು ಮಾಡಿಕೊಂಡು ಅನುಭವಿಸುತ್ತಿದ್ದರು ಎಂದರೆ ಸರಿ. ಈಗ ನನಗೆ ಒಂದು ದಾಖಲೆಯನ್ನು ತೋರಿಸಿದ್ದು, ನಿಡಿ-1 ರ

ಆಧಾರದ ಮೇಲೆ ಪ್ರತಿವಾದಿಯ ತಾತನ ಹೆಸರಿಗೆ ಇಂಡೆಕ್ಸ್ ಅಪ್ ಲ್ಯಾಂಡ್ ಮಾಡಲಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಿಡಿ-1 ರ ಆಧಾರದ ಮೇಲೆ ಆಂಜನಪ್ಪ ಮತ್ತು ಪ್ರತಿವಾದಿಯ ತಾತನ ಇಬ್ಬರಿಗೂ ಸಹ ಇಂಡೆಕ್ಸ್ ಅಪ್ ಲ್ಯಾಂಡ್ ಮಾಡಲಾಗಿರುತ್ತದೆ ಎಂದು ನುಡಿದಿರುತ್ತಾರೆ. ಸದರಿ ದಾಖಲೆಯನ್ನು ನಿಡಿ-2 ಎಂದು ಗುರುತಿಸಲಾಯಿತು. ಪ್ರತಿವಾದಿಯ ತಾತನ ಹೆಸರು ಆಂಜನಪ್ಪ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಸಾಕ್ಷಿಯು ಮುಂದುವರೆದು ವಂಶವೃಕ್ಷವನ್ನು ಹಾಜರುಪಡಿಸಿರುವುದಾಗಿ ನುಡಿದಿರುತ್ತಾರೆ.

ನಿಪಿ-8 ನ್ನು ಮಾಡಲು ನಮ್ಮ ವಕೀಲರು ಮಾಹಿತಿಯನ್ನು ನೀಡಿರುತ್ತಾರೆ. ನಿಪಿ-8 ನ್ನು ಮಾಡಲು ಯಾವ ಆಧಾರದ ಮೇಲೆ ನನ್ನ ವಕೀಲರು ಮಾಹಿತಿಯನ್ನು ನೀಡಿದ್ದರು ಎಂದರೆ ಯಾವ ಆಧಾರವೂ ಇರುವುದಿಲ್ಲ. ಆಂಜನಪ್ಪನವರ ತಂದೆಯ ಹೆಸರು ಮುದ್ದ ಹನುಮೇಗೌಡ. ಮುದ್ದ ಹನುಮೇಗೌಡರವರ ಮಗ ಆಂಜನಪ್ಪ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಆಂಜನಪ್ಪನವರು ಮೂಲ ವಾದಿಯ ತಾತ ಅಲ್ಲ ಮತ್ತು ಅವರಿಬ್ಬರಿಗೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಆಂಜನಪ್ಪನವರ ತಂದೆಯ ಹೆಸರು ಮುದ್ದ ಹನುಮೇಗೌಡ ಎಂದು ಹೇಳಿ ನಾನು ವಾದಪತ್ರದಲ್ಲಿ ಆಗಲೀ ಅಥವಾ ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಸರಿ. ಮೂಲ ವಾದಿಯು ಅವರ ಕುಟುಂಬದ ವಂಶವೃಕ್ಷವನ್ನು ಕೇಳಿ ತಾಲ್ಲೂಕು ಆಫೀಸ್ ಗೆ ಯಾವುದೇ

ಅರ್ಜಿಯನ್ನು ಸಲ್ಲಿಸಿರುವುದಿಲ್ಲ ಮತ್ತು ಅದಕ್ಕೆ ಪ್ರಯತ್ನವನ್ನು ಸಹ ಮಾಡಿರುವುದಿಲ್ಲ. ನಿಪಿ-8 ನ್ನು ಈ ದಾವೆಗೋಸ್ಕರ ತಯಾರು ಮಾಡಿರುತ್ತೇವೆ ಎಂದರೆ ಸರಿ.

**ಈ ಹಂತದಲ್ಲಿ ಪಾಟೀ ಸವಾಲಿಗೆ ಸಮಯಕೋರಿದ್ದು, ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2 ನೇ ಅ. ಸಿ. ಜ. ಮತ್ತು ಜೆ.ಎಂ.ಎಫ್.ಸಿ, ಮಾಗಡಿ.**